ಸಾಕ್ಷಿಯನ್ನು ದಿನಾಂಕಃ **23.02.2024** ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತುಃ

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ವಿ.ಆರ್.ಹೆಚ್ ವಕೀಲರಿಂದಃ

ನಾನು 9 ವರ್ಷಗಳಿಂದ ಪಿರ್ಯಾದಿ ಸಂಸ್ಥೆಯ ಹೆಸರಿನಲ್ಲಿ ವ್ಯವಹಾರ ಮಾಡುತ್ತಿದ್ದೇನೆ. ನಾನು ಆದಾಯ ತೆರಿಗೆ ಪಾವತಿದಾರ ಇರುತ್ತೇನೆ ಎಂದರೆ ಸರಿ. ನಾನು GST ಯಲ್ಲಿಯೂ ಕೂಡ ಪಾವತಿದಾರ ಆಗಿರುತ್ತೇನೆ ಎಂದರೆ ಸರಿ. ಪಿರ್ಯಾದಿ ಸಂಸ್ಥೆಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಮತ್ತು ನಮ್ಮ ಆದಾಯಕ್ಕೆ ಸಂಬಂಧಪಟ್ಟಂತೆ Books of Accounts ನಿರ್ವಹಣೆ ಮಾಡುತ್ತೇವೆ ಎಂದರೆ ಸರಿ.

2. M/s. Panasonic Life Solutions India PVT Ltd ಕಂಪನಿಗೆ ನಾನು ಚಾನಲ್ ಪಾರ್ಟ್ನರ್ ಆಗಿರುತ್ತೇನೆ. ನಾನು ಚಾನಲ್ ಪಾರ್ಟ್ನರ್ ಆದ ಬಗ್ಗೆ ಒಪ್ಪಂದ ಪತ್ರ ಇರುತ್ತದೆ. ಆ ದಾಖಲೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. M/s. Panasonic Life Solutions India PVT Ltd ಕಂಪನಿಯವರು ನೇರವಾಗಿ ಸರಕುಗಳನ್ನು ಮಾರಾಟ ಮಾಡುವ ಆಗಿಲ್ಲ, ಚಾನಲ್ ಪಾರ್ಟ್‌ನರ್ ಮೂಲಕವೇ ಮಾರಾಟ ಮಾಡಬೇಕು ಎಂದರೆ ಸರಿ. ನಾನು ಚಾನಲ್ ಪಾರ್ಟನರ್ ಆಗಿ 7 ವರ್ಷಗಳಾಗಿರುತ್ತವೆ. ಆರೋಪಿ ಕಂಪನಿಯವರು ನನಗೆ ಸರಕುಗಳನ್ನು ಸರಬರಾಜು ಮಾಡಿ ಎಂದು ಯಾವತ್ತೂರ್ ನಮಗೆ ಸಂಪರ್ಕಿಸಿಲ್ಲ ಎಂದರೆ ಸಾಕ್ಷಿಯು ಒಂದು ಬಾರಿ ಬಿಟ್ಟು ಉಳಿದ ಬಾರಿ ಸಂಪರ್ಕಿಸಿರುತ್ತಾರೆ ಎಂದು ನುಡಿಯುತ್ತಾರೆ.

2. ನಾವು ಯಾವುದೇ ಸರಕು ಸರಬರಾಜು ಮಾಡಬೇಕಾದರೆ Purchase order ಮೂಲಕ ಮಾಡುತ್ತೇವೆ ಎಂದರೆ ಸರಿ. ನಮಗೆ ಕೊಟ್ಟಂತಹ purchase order ಗಳನ್ನು ನಾವು ಇಟ್ಟುಕೊಂಡಿರುತ್ತೇವೆ ಮತ್ತು ಅವುಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೌಖಿಕವಾಗಿ ಕೂಡ Order ತೆಗೆದುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಆರೋಪಿ ಕಂಪನಿಯು M/s. Panasonic Life

This is a True Copy of the Court Records Online. Authenticated @ districts.ecourtsindia.com/cnr/KABC020065492023/truecopy/order-1.pdf

www.ecourtsindia.com



Solutions India PVT Ltd ಕಂಪನಿಯವರಿಗೆ ಕೊಟ್ಟಿದ್ದ Order ಗೆ ಸಂಬಂಧಿಸಿದಂತೆ ಆರೋಪಿ ಕಂಪನಿಗೆ ಸರಕು ಸರಬರಾಜು ಮಾಡಿರುತ್ತೇವೆ ಎಂದರೆ ಸರಿ. M/s. Panasonic Life Solutions India PVT Ltd ಕಂಪನಿಯ ಮುಖ್ಯ ಕಛೇರಿ ಹರಿಯಾಣದಲ್ಲಿರುತ್ತದೆ ಎಂದರೆ ಸರಿ. ಆ ಕಂಪನಿಗೆ ಸಂಬಂಧಿಸಿದ ಗೋದಾಮು ಸರ್ವೆ ನಂ.47/1, 47/2 ಬೂದಿಹಾಳ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಎಂದು ಇರುತ್ತದೆ ಎಂದರೆ ಸರಿ. ಆ ಕಂಪನಿಯ ಬೆಂಗಳೂರು ಕಛೇರಿಯ ವಿಳಾಸವು A Wing, No.11, Divyashree chambers, Bangalore-25 ಎಂದು ಇರುತ್ತದೆ ಎಂದರೆ ಸರಿ. ಆ ಕಂಪನಿಯಲ್ಲಿ ಚಂದ್ರಶೇಖರ್ ರವರು Sales Manager ಆಗಿ ಮತ್ತು ಮುಕುಂದ ಎನ್ನುವವರು AGM Manager ಆಗಿ ಕೆಲಸ ಮಾಡುತ್ತಾರೆ ಎಂದರೆ ಸರಿ.

3. ನಾವು ಮೊದಲ ಬಾರಿಗೆ ಆರೋಪಿ ಕಂಪನಿಗೆ ಮೇ 2022 ರಲ್ಲಿ ಸರಕುಗಳನ್ನು ಕೊಟ್ಟಿರುತ್ತೇವೆ. ನಿ.ಪಿ.1 ರಲ್ಲಿ ತೋರಿಸಿದ ಬೆಲೆಯನ್ನು ನಾವು M/s. Panasonic Life Solutions India PVT Ltd ಕಂಪನಿಯವರು ಮಾಡಿದ ಮೊತ್ತದ ಆಧಾರದ ಮೇಲೆ ತೋರಿಸಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಚಂದ್ರಶೇಖರ್ ಎನ್ನುವವರು ಆರೋಪಿ ಕಂಪನಿಗೆ ಬೆಲೆಯ ಬಗ್ಗೆ ದಾಖಲೆ ಕೊಟ್ಟಿರುತ್ತಾರೆ ಎಂದು ಪ್ರಶ್ನೆ ಕೇಳಿದಾಗ ಸಾಕ್ಷಿಯು ಆ ದಾಖಲೆಯನ್ನು ನೋಡಿ ಹೌದು ಎಂದು ನುಡಿದಿದ್ದು ಆದ ಕಾರಣ ಆ ದಾಖಲೆಯನ್ನು ನಿ.ಡಿ.**1** ಎಂದು ಗುರುತಿಸಲಾಯಿತು.

4. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿ ಆರೋಪಿ ಕಂಪನಿಯವರು ಈ ದಾಖಲೆ ಮೂಲಕ Purchase order ನ್ನು M/s. Panasonic Life Solutions India PVT Ltd ರವರಿಗೆ ಕೊಟ್ಟಿರುತ್ತಾರೆ ಎಂದು ಪ್ರಶ್ನೆ ಕೇಳಿದಾಗ ಸಾಕ್ಷಿಯು ಆ ದಾಖಲೆಯನ್ನು ನೋಡಿ ಹೌದು ಎಂದು ನುಡಿದಿದ್ದು ಆದ ಕಾರಣ ಆ ದಾಖಲೆಯನ್ನು ನಿ.ಡಿ.**2** ಎಂದು ಗುರುತಿಸಲಾಯಿತು. ನಿ.ಡಿ.2 ರಲ್ಲಿ ತೋರಿಸಿದ Material ಗಳನ್ನು ಕೋಟಾಗೆ ಸರಬರಾಜು ಮಾಡಬೇಕಿತ್ತು ಎಂದರೆ ಸರಿ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿ ಸದರಿ

This is a True Copy of the Court Records Online. Authenticated @ districts.ecourtsindia.com/cnr/KABC020065492023/truecopy/order-1.pdf

www.ecourtsindia.com



ದಾಖಲೆಯ ಪ್ರಕಾರ M/s. Panasonic Life Solutions India PVT Ltd ರವರು ಕೋಟಾದಲ್ಲಿ Material ಸರಬರಾಜು ಮಾಡಿ Billing ವಿಳಾಸದಲ್ಲಿ ನಮ್ಮ ಹೆಸರು ತೋರಿಸಿರುತ್ತಾರೆ ಎಂದು ಪ್ರಶ್ನೆ ಕೇಳಿದಾಗ ಸಾಕ್ಷಿಯು ಆ ದಾಖಲೆ ನೋಡಿ ಹೌದು ಎಂದು ಒಪ್ಪಿಕೊಂಡಿದ್ದು ಆದರೆ ಆ ದಾಖಲೆಯು ಸರಿಯಾಗಿ ಮುದ್ರಣಗೊಳ್ಳದಿದ್ದ ಕಾರಣ ಸದರಿ ದಾಖಲೆಯನ್ನು ತಕರಾರಿಗೆ ಒಳಪಟ್ಟು ಆ ದಾಖಲೆಯನ್ನು ನಿ.ಡಿ.3 ಎಂದು ಗುರುತಿಸಲಾಯಿತು. (ಪ್ರಾಜ್ಞ ಆರೋಪಿ ಪರ ವಕೀಲರಿಗೆ ಸದರಿ ದಾಖಲೆಯ ಸರಿಯಾದ ದಾಖಲೆಯನ್ನು ಹಾಜರು ಪಡಿಸುವಂತೆ ಸೂಚಿಸಲಾಯಿತು).

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಿ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ

24 ನೇ ಎ ಎಸ್ ಸಿ ಜೆ ಮತ್ತು ಎ ಸಿ ಎಂ ಎಂ
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC020065492023/truecopy/order-1.pdf